doc-606
T-P-2

Reg No B G 155 14 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕೀಸ್ತಾನಕ್ಕೆ ಎರಡು ಗ್ರಾಮಗಳು ಸೇರಿದವು

ಪಶುವಧೆಗೆ ಪ್ರೋತ್ಸಾಹವೇ ?

ಗೋಮಾತೆಯನ್ನು ಚುನಾವಣೆ ಲಾಂಛನವನ್ನಾಗಿ ತೋರಿಸಿ ಇಂದಿರಾ ಕಾಂಗ್ರೆಸಿಗರು ಮಾತೆಯರ ಮತಗಳಿಂದಾಗಿ ಅಧಿಕ ಸ್ಥಾನಗಳನ್ನು ಪಡೆದು ಅಧಿಕಾರ ಗದ್ದಿಗೆಯನ್ನೇರಿರುವುದಾಗಿ ಹೇಳಲಾಗುತ್ತಿದೆ. ಕಾಂಗ್ರೆಸಿಗರು ಈ ಲಾಂಛನವನ್ನು ಮಾಸಮಾರಾಟದಂಗಡಿಗಳ ಗುರುತನ್ನಾಗಿ ಉಪಯೋಗಿಸಿಕೊಂಡರೋ ಅನ್ನುವ ಮಾತು ಕೇಳಿಬರುವ ಘಟನೆ ಸಂಭವಿಸಿರುತ್ತದೆ. ಲೋಕಸಭೆಯಲ್ಲಿ ಭಾರತೀಯ ಜನಸಂಘದ ಪದಸ್ಥರೊಬ್ಬರು ಪಶುವಧೆ ಪಶುವಧೆ ಪ್ರತಿಬಂಧಿಸುವ ತೀರ್ಮಾನ ತರಲು ವಿಷಯ ಮಂಡಿಸಿದರು ಅವರ ಮೇಲೆ ಪಾದ-ಪ್ರತಿವಾದ ನಡೆಯಿತು ಅದು ಸಾರ್ವಮೆಂಟಿಗೆ ಸೇರಿದ ವಿಷಯವಲ್ಲ, ಅದಕ್ಕಾಗಿ ಸಂಬಂಧಿಸಿದ ವಿಷಯವೆಂದುಬಿಟ್ಟರು ಕೃಷಿ ಮಂತ್ರಿ ಶೇರ್ ಸಿಂಗ್. ಹಿಂದೆ ಒಂದು ರಾಜ್ಯವು ಅಂತಹ ಕಾನೂನನ್ನು ತಂದಾಗ ಅದನ್ನು ನ್ಯಾಯಾಲಯವು ತಪ್ಪೆಂದಿರುವದನ್ನು ಮರೆಯುವದೆಂತು ? ಹಾಗಾದಲ್ಲಿ ಇದು ರಾಜ್ಯಕ್ಕೂ ಸಂಬಂಧಪಟ್ಟದ್ದಲ್ಲ, ಸಾರ್ವಮೆಂಟಿಗೂ ಸಂಬಂಧಪಟ್ಟದ್ದಲ್ಲ-ಕೇವಲ ಗೋಮಾತೆಗೆ ಸಂಬಂಧಪಟ್ಟದ್ದೇನು ? ಆಕೆ ಮತದಾರಳಾಗಿ ಬಂದಾಗ ಈ ಪ್ರಶ್ನೆ ಬಗೆಹರಿಯಬಹುದು.

ಅಧಿಕಾರಾರೂಢ ಮುಖಂಡರು ನಿರ್ಮಿಸಿರುವ ಸಮಿತಿ ಪಗೈರೆ ಭಾರತೀಯರ ಕಣ್ಣಿಗೆ ಮಣ್ಣೆರಚಲಿಕ್ಕಾಗಿ ಇದೆ; ಇಲ್ಲವಾದಲ್ಲಿ ಕಾಂಗ್ರೆಸ್ ಆಡಳಿತ ಇರುವ ಎಲ್ಲಾ ರಾಜ್ಯಗಳಲ್ಲೂ ಗೋಹತ್ಯೆ ಪ್ರತಿಬಂಧಕ ಕಾನೂನು ಜಾರಿಗೆ ಬರುತ್ತಿತ್ತು.

ಪ್ರಜೆಗಳ ಬಹುದಿನಗಳ ಬೇಡಿಕೆ ನೆರವೇರುವಂತೆ ಕೂಡಲೇ ಕಾನೂನು ಜಾರಿಗೆ ಬರಲಿ : ಪಶುವಧೆ ನಿಲ್ಲಲಿ ; ಗೋರಕ್ಷಣೆ ಹೆಚ್ಚಾಗಲಿ — ಶಿವಶಂಕರ

★

ಈ ತಿಂಗಳು 18 ನೇ ತಾ॥ ಮೈಸೂರು ಪೌರಸಭೆಯ ಮುಂದಿನಿಂದ ಸಭೆ ನಡೆಯುವುದಾಗಿದೆ.

ಪರಿಶೀಲನೆಯಲ್ಲಿ

ವಿದ್ಯಾರ್ಥಿನಿಲಯಗಳಿಗೆ ವಿದ್ಯುತ್ ಪೂರೈಕೆಯನ್ನು ವಿನಾಯಿತಿ ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವದಾಗಿ ವಿಧಾನ ಸಭೆಯಲ್ಲಿ ವಿದ್ಯುತ್ ಮಂತ್ರಿಯವರು ತಿಳಿಸಿದರೆಂದು ಬೆಂಗಳೂರಿನಿಂದ ಬಂದ ವಾರ್ತೆ ತಿಳಿಸುತ್ತದೆ.

★

ಬೆತ್ತಲೆ ಜಾಹೀರಾತು

ಬೆತ್ತಲೆ ಜಾಹೀರಾತು ಪ್ರಕಟಣೆ ಮಾಡದಂತೆ ಪತ್ರಿಕಾ ಕೈಗಾರಿಕೆಯಲ್ಲಿ ವಿನಂತಿ ಮಾಡಿರುವುದಾಗಿಯೂ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುವರೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು

○

ಉದ್ಘಾಟನ ಸಮಾರಂಭ

ಈ ತಿಂಗಳು 15 ನೇ ತಾ. ಸಂಜೆ 6 ಗಂಟೆಗೆ ಪುರಭವನದಲ್ಲಿ ಮೈಸೂರು ಪುರಸಭೆ ಆಶ್ರಯದಲ್ಲಿ ನಡೆಯಲಿರುವ ಲಲಿತ ಕಲಾ ಮಹೋತ್ಸವಕ ಉದ್ಘಾಟನ ಸಮಾರಂಭವನ್ನು ಪುರಸಭಾಧ್ಯಕ್ಷರಾದ ಶ್ರೀ ಕೆ. ಎಸ್. ಸೋಮಸುಂದರಂರವರು ನೆರವೇರಿಸುವರು ಪ್ರತಿದಿನ ಸಾಯಂಕಾಲ 6 ಗಂಟೆಯಿಂದ ವಿವಿಧ ಸಾಂಸ್ಕೃತಿಕಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತೆ.

★

ತಿರುಪ್ಪಾವೈ

ಮೈಸೂರಿನ ಅಖಿಲ ಶ್ರೀ ವೈಷ್ಣವ ಮಹಾಸಭಾ ಆಶ್ರಯದಲ್ಲಿ ಈ ತಿಂಗಳು 16 ನೇ ತಾ. ಸಿಂದ ಮುಂದಿನ ತಿಂಗಳು 13 ನೇ ತಾ ವರೆಗೆ ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಿಲ ಮಠದಲ್ಲಿ ಪ್ರತಿದಿನ ಸಂಜೆ 6 ಗಂಟೆಯಿಂದ ಶೋಲಿಂಗಪುರದ ಶ್ರೀ ಕೆ. ಕೆ. ಸಿ. ಪೆರಿಯ ಪ್ರಂಗಾರ್ಯರು ತಿರುಪ್ಪಾವೈ ಕಾಲಕ್ಷೇಪವನ್ನು ನಡೆಸಿಕೊಡುವರು.

ಮಾಜಿ ರಾಜರಿಗೆ ಖರ್ಚು

ಬೆಂಗಳೂರು— ರಾಜ್ಯ ಸರಕಾರವು ರಾಜ್ಯದ ಮಾಜಿ ರಾಜರುಗಳ ರಾಜಧನದ ಹೊರೆ ಹೊರದಿದ್ದರೂ, ಅದು ಮಾಜಿ ಮೈಸೂರು ರಾಜರ ಹಕ್ಕುಬಾಧ್ಯತೆಗಳಿಗಾಗಿ ರೂ. 7083075 ಖರ್ಚು ಮಾಡಿದೆ ಎಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯ್ತು.

★

ತಕ್ಷಣ ಸಮಾಜವಾದ

ಬೆಂಗಳೂರು— ತೆಕ್ಷಣ ಸಮಾಜವಾದ ಜಾರಿಗೆ ತರಲು ಎಲ್ಲ ವಿಧದ ಆದಾಯದ ಕ್ಕೂ ಪರಿಮಿತಿ ಹಾಕಬೇಕೆಂದು ಶ್ರೀ ವಿಶ್ವನಾಥ ರೆಡ್ಡಿಯವರು ಶಾಸನಸಭೆಯಲ್ಲಿ ಹೇಳಿದರು.

●

ತಾವು ಇಳಿದಿದ್ದ ಸ್ಥಳ

ಬೆಂಗಳೂರು— ತಾವು ಅಹಮದಾಬಾದಿಗೆ ವಿಮಾನದಲ್ಲಿ ವಿಮಾನಿಂಗಿಗೆ ಹೋಗಿದ್ದಾಗ ಬಿಲ್ಗಾರ ಅತಿಥಿಗೃಹದಲ್ಲಿ ಇಳಿದುಕೊಂಡಿದುದೆಂಬ ಅಸಾದೆನೆಯನ್ನು ನಿರಾಕರಿಸಿ, ತಾವು ಇಳಿದುಕೊಂಡಿದ್ದದು ಸರ್ಕಾರಿ ಅತಿಥಿ ಗೃಹದಲ್ಲಿ ಎಂದು ಶಾಸನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು ಹೇಳಿದರು.

★

ವಿದ್ಯಾರ್ಥಿ ಚಳವಳಿ

ಚಿತ್ರದುರ್ಗ— ವಿದ್ಯುಚ್ಛಕ್ತಿ ಪೋತಾವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ವಿದ್ಯುತ್ ಕಚೇರಿಗೆ ಹೋಗಿ ತಮಗೆ ರಿಯಾಯಿತಿ ಕೊಡಬೇಕೆಂದು ಕೇಳಿಕೊಂಡರು – ನಂತರ ಹೋಟಲುಗಳಿಗೆ ಸುಗ್ಗಿ ಊಟ ಮತ್ತು ವಸತಿ ದರ ಹೆಚ್ಚಿಸಿರುವದನ್ನು ಪ್ರತಿಭಟಿಸಿದರು – ಸಕಾಲದಲ್ಲಿ ಪೋಲೀಸರ ಆಗಮನದಿಂದ ಶಾಂತಿಯಿಂದ ಪರ್ಯವಸಾನವಾಯಿತು.

★

ಜಡ್ಜರು ಕೋರ್ಟಿಗೆ ಬರಲಿಲ್ಲ

ಕೊಲಂಬೊ— ಶಾಸನಸಭೆಯು ತನ್ನ ಸ್ವಾಮಿತ್ವ ಹೆಚ್ಚೆಂದು ಖಡಾಖಂಡಿತವಾಗಿ ವ್ಯಕ್ತವಡಿಸಿದ್ದರಿಂದ, ಪ್ರೆಸ್ ಕೌನ್ಸಿಲ್ ಮಸೂದೆ ಮೂಖದ್ದಮೆ ವಿಚಾರಣೆ ನಡೆಸುತ್ತಿದ್ದ ಶ್ರೀ ಲಂಕಾ ರಾಜ್ಯಾಂಗ ಕೋರ್ಟಿನ ಜಡ್ಜರು ಕೋರ್ಟಿಗೆ ಬರಲಿಲ್ಲ, ವಿಚಾರಣೆ ನಿಂತಿತು.

★

ಮಂತ್ರಿಗಳ ಮನೆ ರಿಪೇರಿ

ನವದೆಹಲಿ— 1969 ನೇ ಆಗಸ್ಟ್‌ನಿಂದ ಇಲ್ಲೀವರೆಗೆ ದೆಹಲಿಯಲ್ಲಿ ಮಂತ್ರಿಗಳ ವಾಸಸ್ಥಾನಗಳಲ್ಲಿ ಕಟ್ಟಡ ಹೆಚ್ಚಿಸುವುದು ಬದಲಾವಣೆ ಮಾಡುವುದು ಮತ್ತು ರಿಪೇರಿ ಮಾಡುವುದಕ್ಕೆ ರೂ. 2068067 ಖರ್ಚಾಗಿರುವದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ಎಲ್ಲಾದರೂ ಕೆಲಸಮಾಡಬೇಕು

ನವದೆಹಲಿ— ಯಾವ ಭಾರತೀಯನೂ ದೇಶದ ಯಾವ ಸ್ಥಳದಲ್ಲಿಯಾದರೂ ಕೆಲಸ ಮಾಡಬೇಕೆಂಬ ತತ್ವದ ಬಗ್ಗೆ ಸರ್ಕಾರ ದೃಢವಾಗಿದೆ ಎಂದ ಪ್ರಧಾನಿ ಇಂದಿರಾರವರು ಲೋಕಸಭೆಯಲ್ಲಿ ತಿಳಿಸಿದರು.

●

ಕೈಗಡಿಯಾರಗಳ ವಶ

ಬೊಂಬಾಯಿ— ಉತ್ತರ ಬೊಂಬಾಯಿನ ಮಾರೋಲಿನಲ್ಲಿ ಒಂದು ಮನೆಯಲ್ಲಿ ಕಸ್ಟಂಸ್‌ರವರು ರೂ. 17 ಲಕ್ಷ ಬೆಲೆಯ 16500 ಕೈಗಡಿಯಾರಗಳನ್ನು ವಶಪಡಿಸಿಕೊಂಡರು.

●

ಎರಡು ಹಳ್ಳಿ ಹೋಯಿತು

ನವದೆಹಲಿ— ಜಮ್ಮು-ಕಾಶ್ಮೀರ ಭಾದಗದಲ್ಲಿ ಹತೋಟಿ ರೇಖೆಯಲ್ಲಿ 0.45 ಚರ ಮೈಲಿ ಜಾಗದ 2 ಹಳ್ಳಿಗಳ ಮೇಲೆ ಭಾರತವು ತನ್ನ ಹಕ್ಕನ್ನು ತ್ಯಜಿಸಿತು.

ಮಂತ್ರಿಪದವಿ ಹೋದರೆ ಗೋಪಾಲಕನಾಗುವೆ

ಬೆಂಗಳೂರಿನ ಕುರುಬರ ಸಂಘದ ಹೊನ್ನಿನ ಹಬ್ಬದ ಸಮಾರಂಭದಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಮಾತನಾಡುತ್ತಾ, ಮುಖ್ಯಮಂತ್ರಿ ಪದವಿ ಹೋದರೆ, ದನಕಾಯುವುದಕ್ಕೆ ಹೋಗುತ್ತೇನೆ ; ನನ್ನ ಆಜ್ಜ ಮುತ್ತಜ್ಜರ ಕಸುಬು ದನಕಾಯುವುದೇ ಆಗಿತ್ತು ; ದನಕಾಯುವ ಕೆಲಸ ಅಲ್ಪವೆಂದು ತಿಳಿದಿಲ್ಲ; ಯಾವ ಕೆಲಸವನ್ನೂ ಕೀಳು ಎಂದು ಭಾವಿಸಬಾರದು ; ದೇಹ ಶ್ರಮಪಡುವುದೇ ತಪಸ್ಸು ಎಂದರು. (ಮೈಸೂರು ಪತ್ರಿಕೆ)

ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರು

ಪಶ್ಚಿಮ ಜರ್ಮನಿಯಲ್ಲಿಯ ಫ್ರಾಂಕ್‌ಫರ್ಟ್‌ನ ರೇಹ್ಯಮೇ ಭಾಗಗಳಿಗೆ ಪ್ರಥಮ ಮಹಿಳಾ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಆಡಿಲ್ ಹೀಡ್ ಸಾಹಲ್ ಬಂದಿದ್ದಾರೆ ಫೋರ್ಜರಿ ಮಾಡುವವರಿಗೆ, ಆಯುಧಾಪಕ್ರಮ ಸಾಗಾಣಿಕೆಗಾರರಿಗೆ, ಔಷಧಿ ಕಳ್ಳ ವ್ಯಾಪಾರಿಗಳಿಗೆ, ಇತರ ತಕ್ಸೀರುದಾರರಿಗೆ ಪ್ರಾಣಸಂಕಟವಾಗಿದೆ – ಅವರಾಧಿಗಳನ್ನು ಮಟ್ಟಹಾಕಲು ಬದ್ಧಕಂಕಣರಾಗಿದ್ದಾರೆ.

ವಿದ್ಯಾರ್ಥಿಗಳ ಶುಲ್ಕ ಕಡಮೆಯಾಗಬೇಕು

ಧಾರವಾಡ— ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳು ಶುಲ್ಕವನ್ನು ಹಳೇ ದರಡಲ್ಲಿ ವಸೂಲ್ಮಾಡುವಂತೆ ತಿಳಿಸುವ ನಿರ್ಣಯವು ಮಂಜೂರ್ಮಾಡಲಾಯಿತು.

ವುಡ್‌ಲಾಂಡ್ಸ್ 15 12 72 ರಿಂದ ಅಪೂರ್ವ ಪ್ರಾರಂಭ

ನೆವೆ ಆರ್ಟ್ಸ್ ಪಿಕ್ಚರ್ಸ್‌ರವರ
ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 4 ಪ್ರದರ್ಶನಗಳು-
ದಿನ ಬೆಳಿಗ್ಗೆ 10-30, ಮಧ್ಯಾಹ್ನ 2-45, ಸಂಜೆ 6-30, ರಾತ್ರಿ 9-45

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲೆ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಸೂಚನೆ : ಬಾಲ್ಕನಿ ತರಗತಿಗಳಿಗೆ ದಿನ ಬೆಳಿಗ್ಗೆ 11–15 ರಿಂದ 12–15ರ ವರೆಗೆ ಮುಂಗಡ ಟಿಕೆಟ್ ಕೊಡಲಾಗುತ್ತದೆ

ಅಪೆರಾ 8 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ ಹಮಾರ
ಪೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್
ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

SHAKTI
SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ

Protect the Cow



Quality Printing Neat Binding

Lakshminarasimha Press

Sivarampet, Mysore

Edited Printedand Publishedby Dharmapracharanirata M S Krishna Rao (Propretor) at the Satyavadi Press, Chamarajapuram Mysore —

Help The Gorakshana

— Humanitarian Propoganda Monthly —

Contribute Liberally to the National Defence Fund